ಇ) ಮೀಸಲಾತಿ ನೀತಿಯು ಹಲವಾರು ಬಾರಿ ಬದಲಾವಣೆಗೊಳಪಟ್ಟಿದ್ದರಿಂದ, ಇವುಗಳನ್ನು ತುಂಬಲಾಗಲಿಲ್ಲ. ಮೀಸಲಾತಿಯನ್ನು ಶೇಕಡ 50ಕ್ಕೆ ಮಿತಿಗೊಳಿಸುವಂತೆ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಆಧಾರದ ಮೇಲೆ ನೇರ ನೇಮಕಾತಿಗೆ ಪರಿಷ್ಕೃತ ಮೀಸಲಾತಿ ರೋಸ್ಟರ್‌ನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 8 ಸೆಹಿಮ 95 ದಿನಾಂಕ 20-6-95ರಲ್ಲಿ ನಿಗಧಿಪಡಿಸಲಾಗಿದೆ.

ಈ) ಹೌದು.

ಉ) ಖಾಲಿ ಹುದ್ದೆಗಳನ್ನು ಪ್ರಕಟಿಸಿ ಅರ್ಜಿಗಳನ್ನು ಆಹ್ವಾನಿಸುವ ಮೂಲಕ ನೇಮಕಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಊ) ಹೊಸ ಮೀಸಲಾತಿಯನ್ವಯ ಹುದ್ದೆಗಳನ್ನು ಪುನರ್‌ವಿಂಗಡಿಸಿ. ತುರ್ತುಕ್ರಮ ಕೈಗೊಳ್ಳಲಾಗುವುದು.

ವಿಷಯ :- ಸಚಿವಾಲಯದಲ್ಲಿ ಗ್ರೂಪ್-ಸಿ ನೌಕರರ ವರ್ಗಾವಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1593 (1895)

ಶ್ರೀ ಕುಂಬಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ 10 ವರ್ಷಗಳಿಗೂ ಮೇಲ್ಪಟ್ಟು ಒಂದೇ ಇಲಾಖೆಯಲ್ಲಿ ಕೆಲಸ ನಿರ್ವಹಿಸಬೇಕೆನ್ನುವ ವಿಶೇಷ ನಿಯಮವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ 10 ವರ್ಷಗಳಿಗೂ ಮೇಲ್ಪಟ್ಟು ಒಂದೇ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರನ್ನು ಬೇರೆ ಇಲಾಖೆಗೆ ವರ್ಗಾಯಿಸದೇ ಇರಲು ಕಾರಣವೇನು? ಅಂಥವರನ್ನು ಬೇರೆ ಇಲಾಖೆಗಳಿಗೆ ವರ್ಗಾಯಿಸಲು ಕ್ರಮ ಜರುಗಿಸಲಾಗವುದೇ?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) ಇಲ್ಲ

ಆ) ಕರ್ನಾಟಕ ಸರ್ಕಾರ ಸಚಿವಾಲಯದ ಕೆಲವು ಇಲಾಖೆಗಳಲ್ಲಿ ಕೆಲವೇ ಗ್ರೂಪ್ ಸಿ ವರ್ಗದ ಸಹಾಯಕರು ಶ್ರೇಫ್ರುಲಿಪಿಗಾರರು ಹಾಗೂ ಕಿರಿಯ ಸಹಾಯಕರುಗಳು ಒಂದೇ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಅವರಗಳನ್ನು ಸಂಬಂಧಿಸಿದ ಇಲಾಖೆಯಲ್ಲಿರುವ ವಿಶಿಷ್ಟ ರೀತಿಯ ಕಾರ್ಯ ನಿರ್ವಹಣೆ ಇರುವುದನ್ನು ಪರಿಗಣಿಸಿ ಆ ಇಲಾಖೆಯ ಅನುಕೂಲಕ್ಕಾಗಿ ಆ ಸಿಬ್ಬಂದಿಗೆ ಇರುವ ವಿಷಯ ಪರಿಜ್ಞಾನ, ನಿಪುಣತೆ ಇವುಗಳನ್ನು ಪರಿಗಣಿಸಿ ಮುಂದುವರೆಸಲಾಗಿರುತ್ತದೆ. ಆದರೂ ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಇಂತಹ ಗ್ರೂಪ್ ಸಿ ನೌಕರರನ್ನು ಬೇರೆ ಇಲಾಖೆಗೆ ವರ್ಗಾಯಿಸಲು ಪರಿಶೀಲಿಸಲಾಗುವುದು.

ವಿಷಯ:- ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಶಾಖಾಧಿಕಾರಿಗಳನ್ನು ತುಂಬಲು ಒತ್ತಾಯ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 1594 (1894)

ಶ್ರೀ ಕುಂಬಳೆ ಸುಂದರ ರಾವ್ (ಸುರತ್‌ಕಲ್):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಚಿವಾಲಯದಲ್ಲಿ ನೇರ ನೇಮಕಾತಿಯ ಮೂಲಕ ತುಂಬಬೇಕಾದ ಶಾಖಾಧಿಕಾರಿ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ ಸದರಿ ಹುದ್ದೆಗಳು ಯಾವ ದಿನಾಂಕದಿಂದ ಖಾಲಿ ಇರುತ್ತವೆ. ಹಾಗೂ ಇದುವರೆವಿಗೂ ತುಂಬದಿರಲು ಕಾರಣವೇನು

ಇ) ಈ ಖಾಲಿ ಹುದ್ದೆಗಳನ್ನು ಯಾವಾಗ ನೇಮಕಾತಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) 80

ಆ) ದಿನಾಂಕ: 1-5-91 ರಿಂದ 31-7-95ರ ಅವಧಿಯಲ್ಲಿ ಈ ಖಾಲಿ ಹುದ್ದೆಗಳು ಉದ್ಭವಿಸಿರುತ್ತವೆ. ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ತುಂಬುವ ಬಗ್ಗೆ ನಿರ್ಬಂಧವಿದ್ದುದರಿಂದ ಈ ಹುದ್ದೆಗಳಿಗೆ ನೇಮಕಾತಿ ಮಾಡಿರುವುದಿಲ್ಲ.

ಇ) ಶಾಖಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ವಿಷಯವನ್ನು ಸರ್ಕಾರ ಪರಿಶೀಲಿಸುತ್ತಿದೆ. ಈ ಬಗ್ಗೆ ಆದಷ್ಟು ಬೇಗನೆ ಕ್ರಮ ಕೈಗೊಳ್ಳಲಾಗುವುದು.

ವಿಷಯ :- ಕಡೂರು ತಾಲ್ಲೂಕಿನ ಕಬ್ಬಳ್ಳಿ ಏತ ನೀರಾವರಿ ಕುರಿತು

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 1595 (1596)

ಶ್ರೀ ಎಸ್.ಆರ್.ಲಕ್ಷ್ಮಯ್ಯ (ಬೀರೂರು):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಕಡೂರು ತಾಲ್ಲೂಕಿನ ಕಬ್ಬಳ್ಳಿ ಏತ ನೀರಾವರಿ ಯೋಜನೆಗೆ ಯಾವಾಗ ಅಡಿಗಲ್ಲು ಹಾಕಲಾಗಿದೆ.

ಆ)ಈ ಯೋಜನೆಗೆ ಈವರೆವಿಗೂ ತಗಲಿರುವ ವೆಚ್ಚ ಎಷ್ಟು.

ಇ)ಈ ಕಾಮಗಾರಿಯಲ್ಲಿ ಈವರೆವಿಗೂ ಸಾಧಿಸಿರುವ ಪ್ರಗತಿ ಏನು ಹಾಗೂ ಆ ಕಾಮಗಾರಿಯು ಈಗ ಯಾವ ಹಂತದಲ್ಲಿದೆ.

ಈ)ಸದರಿ ಯೋಜನೆಯ ಶಂಕುಸ್ಥಾಪನೆ ಅಡಿಗಲ್ಲಿನಲ್ಲಿ ಯಾರ ಯಾರ ಹೆಸರನ್ನು ನಮೂದಿಸಲಾಗಿದೆ?

ಶ್ರೀ ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆ):-

ಅ) 20-5-93

ಆ) 11.63 ಲಕ್ಷರೂ.ಗಳು

ಇ) ಇನ್‌ಟೇಕ್, ನೀರೆತ್ತುವ ಯಂತ್ರದ ಮನೆ ಏರು ಕೊಳವೆ ನೀರಿನ ತೊಟ್ಟಿ ಕೆಲಸಗಳು ಮುಗಿದಿವೆ. ಮೋಟಾರು ನೀರೆತ್ತುವ ಯಂತ್ರಗಳನ್ನು ಪಡೆದು ಅಳವಡಿಸುವುದು ಹಾಗೂ ಕಾಲುವೆ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ.

ಈ) ಶಂಕುಸ್ಥಾಪನೆ ಅಡಿಗಲ್ಲಿನಲ್ಲಿ ಈ ಕೆಳಕಂಡ ಹೆಸರುಗಳನ್ನು ನಮೂದಿಸಲಾಗಿದೆ.